ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತಮೂರನೆಯ ಅಧಿವೇಶನ
ಸೋಮವಾರ, ದಿನಾಂಕ : 01 ನೇ ಫೆಬ್ರುವರಿ, 2021

ಮಕ್ಕಳ ಖಾಯಿಲೆಗೆ ಸಂಬಂಧಿಸಿದ ಲಸಿಕೆಗಳ ಬಗ್ಗೆ

ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) -

22 (182) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ಪ್ರಸ್ತುತ ಮಕ್ಕಳಿಗೆ ಯಾವ ಯಾವ ಖಾಯಿಲೆಗಳಿಂದ ರಕ್ಷಣೆ ಪಡೆಯಲು ಲಸಿಕೆಗಳನ್ನು ನೀಡಲಾಗುತ್ತಿದೆ ;

(ಆ) ಸದರಿ ಖಾಯಿಲೆಗಳಿಂದ ಸಾಯುತ್ತಿರುವ ಹಾಗೂ ಖಾಯಿಲೆಗೆ ಒಳಪಡುತ್ತಿರುವ ಮಕ್ಕಳ ಸಂಖ್ಯೆ ಎಷ್ಟು ; 3 ವರ್ಷಗಳ ಅಂಕಿ-ಅಂಶಗಳನ್ನು ಒದಗಿಸುವುದು;

(ಇ) ಈ ಖಾಯಿಲೆಗಳಿಂದ ಸಂಪೂರ್ಣವಾಗಿ ರಕ್ಷಣೆ ಪಡೆಯಲು ಇರುವ ಸವಾಲುಗಳೇನು ;

(ಈ) ಅಲೋಪತಿ ವಿಧಾನ ಹೊರತುಪಡಿಸಿ ಇತರೆ ಪದ್ಧತಿಯಿಂದ ಸದರಿ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ನಡೆದಿರುವ ಪ್ರಯತ್ನಗಳೇನು; ಇದರ ಫಲಶೃತಿಗಳೇನು ? (ವಿವರ ನೀಡುವುದು)